

# ಠಾಕೂರ್ ಬಾರಿ

## ರವೀಂದ್ರರ ನೆನಪುಗಳ ಜಂಬೂಸವಾರಿ

**ರವೀಂದ್ರನಾಥ ಟ್ಯಾಗೋರರು ಬಾಳಿ ಬದುಕಿದ 'ಠಾಕೂರ್ ಬಾರಿ' ಭಾರತದ ಸಾಂಸ್ಕೃತಿಕ ನಾಯಕನ ನೆನಪುಗಳನ್ನು ವರ್ತಮಾನಕ್ಕೆ ದಾಟಿಸುವಂತಿದೆ.**

■ ಎಂ.ಎಸ್. ರಘುನಾಥ್

ರವೀಂದ್ರನಾಥ ಟ್ಯಾಗೋರರಿಗೆ ಭಾರತದ ಸಾಂಸ್ಕೃತಿಕ ನಕಾಶೆಯಲ್ಲಿ ವಿಶಿಷ್ಟ ಸ್ಥಾನ. ಬಂಗಾಲದ ನವೋದಯ ಕಾಲದ ಪ್ರಮುಖ ಹೆಸರಾಗಿದ್ದ ಟ್ಯಾಗೋರ್, ವಿಶ್ವ ಮಾನವತೆಯ ಕಟ್ಟಡಕ್ಕೆ ಬುನಾದಿ ಹಾಕಿದ ಹಿರಿಯ ಚೇತನ. ಈ ಚೇತನ ನೆಲೆಕಂಡಿದ್ದ, ಝೊರಾಸಂಕೋದಲ್ಲಿನ 'ಠಾಕೂರ್ ಬಾರಿ'ಗೆ ಈಚೆಗೆ ಭೇಟಿ ನೀಡುವ ಅವಕಾಶ ಒದಗಿಬಂದಿತ್ತು.

ರವೀಂದ್ರನಾಥ ಟ್ಯಾಗೋರರು ಹುಟ್ಟಿ ಬೆಳೆದದ್ದು ಕೋಲ್ಕತ್ತಾ ಬಳಿಯ ಝೊರಾಸಂಕೋ ಎಂಬಲ್ಲಿ. ರವೀಂದ್ರನಾಥ ಟ್ಯಾಗೋರರ ತಾತ ದೇವೇಂದ್ರನಾಥ ಟ್ಯಾಗೋರರದು ಅಲ್ಲಿರುವ 'ಠಾಕೂರ್ ಬಾರಿ' ಕಟ್ಟಡ. ಈ ಕಟ್ಟಡದಲ್ಲೇ ರವೀಂದ್ರರು ಹುಟ್ಟಿದ್ದು, 1861ರ ಮೇ 7ರಂದು. ರವೀಂದ್ರರು ತಮ್ಮ ಬಾಲ್ಯ, ಪ್ರೌಢಾವಸ್ಥೆ ಕಳೆದದ್ದು ಈ ಮನೆಯಲ್ಲೇ. ಅವರ ಜೀವನದ ಮಹತ್ವಪೂರ್ಣ ಚಟುವಟಿಕೆಗಳಿಗೂ ಈ ನೆಲ ಆಡುಂಬೊಲವಾಯಿತು. ಪರದೇಶದ ಅತಿಥಿಗಳ ಸತ್ಕಾರಕ್ಕೆಂದು ನಿರ್ಮಿಸಲಾದ ಪಕ್ಕದ ಬೃಹತ್ ಭವನವು ನಂತರದಲ್ಲಿ, ಅವರ ಕುಟುಂಬದವರೇ ಆದ, ಬಂಗಾಲಿ ಕಲಾ ಪ್ರಕಾರದ ಕಲಾವಿದ ಗಗನೇಂದ್ರನಾಥ ಟ್ಯಾಗೋರರ ಕಲಾಕೃತಿಗಳ ರಚನೆ ಹಾಗೂ ಸಂಗ್ರಹಕ್ಕೆ ಮೀಸಲಾಯಿತು.

ಠಾಕೂರ್ ಮನೆತನದವರು ಬಂಗಾಲದ ನವೋದಯ ಕಾಲಕ್ಕೆ ಹಾಗೂ ಬ್ರಹ್ಮ ಸಮಾಜಕ್ಕೆ ಸಲ್ಲಿಸಿದ ಅಮೋಘ ಸೇವೆಯ ಇತಿಹಾಸವನ್ನು ಸಾರುವ ಮ್ಯೂಸಿಯಂ ಆಗಿ ಟ್ಯಾಗೋರರ ಶತಮಾನೋತ್ಸವ ಸಂದರ್ಭದಲ್ಲಿ (1961ರಲ್ಲಿ) ಪಶ್ಚಿಮ ಬಂಗಾಳ ಸರ್ಕಾರ 'ಠಾಕೂರ್ ಬಾರಿ'ಯನ್ನು ರೂಪಾಂತರಗೊಳಿಸಿತು. ಈ ಮ್ಯೂಸಿಯಂ ಅನ್ನು ಆಗಿನ ಪ್ರಧಾನಿ ಜವಾಹರಲಾಲ್ ನೆಹರು ಲೋಕಾರ್ಪಣೆ ಮಾಡಿದ್ದರು. ನಂತರದ ವರ್ಷಗಳಲ್ಲಿ, ರವೀಂದ್ರನಾಥ ಟ್ಯಾಗೋರರು ಹಾಗೂ ಅವರ ಮನೆತನದ ಇತರೆ ಗಣ್ಯರ ಬಹುಮುಖಿ ಸೇವೆಯನ್ನು ಜನತೆಗೆ ಪರಿಚಯಿಸುವ ಉದ್ದೇಶದಿಂದ 'ರವೀಂದ್ರ ಭಾರತಿ ಮ್ಯೂಸಿಯಂ' ಆಗಿ ಪರಿವರ್ತಿಸಲಾಯಿತು.